# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಗುರುವಾರ, ಜುಲೈ 15, 2021

ಸಂಪುಟ : 48 ಸಂಚಿಕೆ : 62 ☎ 254736 91642 99999 RNI No: 27369/75 KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


**ಭತ್ತದ ನಾಟಿ**



ಚಿತ್ರ: ಜಗಳಿ ಪ್ರಕಾಶ್

ಹರಿಹರ ತಾಲ್ಲೂಕು ದೇವರ ಬೆಳಕೆರೆ ಪಿಕಪ್ ನೀರು ಆಶ್ರಿತ ಪ್ರದೇಶದ ದೇವರಬೆಳಕೆರೆ, ಜರೀಕಟ್ಟೆ, ಗುಳದಹಳ್ಳಿ, ಸಂಕ್ಲೀಪುರ, ಮುದಹದಡಿ ಮತ್ತಿತರೆ ಗ್ರಾಮಗಳ ರೈತರು ಪಂಪ್‌ಸೆಟ್ ನೀರಿನ ಮೂಲಕ ಒಂದು ತಿಂಗಳ ಮುಂಚಿತವಾಗಿಯೇ ಭತ್ತದ ಸಸಿ ಮಡಿ ಸಿದ್ದಪಡಿಸಿಕೊಂಡು ಇದೀಗ ನಾಟಿ ಮಾಡುವ ಕಾರ್ಯದಲ್ಲಿ ತೊಡಗಿದ್ದಾರೆ. ಇದೇ ರೀತಿ ತುಂಗಭದ್ರಾ ನದಿ ಪಾತ್ರದ ರೈತರೂ ಸಹ ನಾಟಿ ಮಾಡುವ ಸಿದ್ಧತೆಯಲ್ಲಿದ್ದಾರೆ. ಭದ್ರಾ ಜಲಾಶಯದ ನೀರು ಅವಲಂಬಿತ ರೈತರು ಜಲಾಶಯದಿಂದ ನೀರು ಬಿಟ್ಟ ನಂತರ ಸಸಿ ಮಡಿ ಚೆಲ್ಲಿ, ನಾಟಿ ಮಾಡಲು ಇನ್ನೂ ಒಂದು ತಿಂಗಳಾಗಬಹುದು. ಗುರುವಾರ ಭದ್ರಾ ಕಾಡಾ ಸಭೆ ನಡೆಯಲಿದ್ದು, ಮುಂಗಾರು ಹಂಗಾಮಿನ ಬೆಳೆಗಳಿಗೆ ನೀರು ಹರಿಸುವ ವೇಳಾಪಟ್ಟಿ ಪ್ರಕಟಿಸುವ ಸಾಧ್ಯತೆ ಇದೆ.

# ಪರಿಹಾರಕ್ಕೆ ಪಹಣಿ ತೊಡಕು

## ಪಹಣಿ ವಿವರ ಹೊಂದಾಣಿಕೆಯಾಗದೇ ರೈತರಿಗೆ ತಲುಪದ ಪರಿಹಾರ

## ಅಧಿಕಾರಿಗಳು ತ್ವರಿತ ಕ್ರಮ ತೆಗೆದುಕೊಳ್ಳಲು ಸಚಿವ ಭೈರತಿ ಸೂಚನೆ



ದಾವಣಗೆರೆ, ಜು. 14 - ಪಹಣಿ ವಿವರಗಳು ಹೊಂದಾಣಿಕೆಯಾಗಿಲ್ಲ ಎಂಬ ಕಾರಣಕ್ಕಾಗಿ ರೈತರು ಕೊರೊನಾ ಪರಿಹಾರದಿಂದ ವಂಚಿತರಾಗಬಾರದು. ಈ ಬಗ್ಗೆ ಉಪವಿಭಾಗಾಧಿಕಾರಿ, ತಹಶೀಲ್ದಾರ್ ಹಾಗೂ ಕಂದಾಯ ಅಧಿಕಾರಿಗಳು ತ್ವರಿತವಾಗಿ ಕ್ರಮ ತೆಗೆದುಕೊಳ್ಳಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಸೂಚನೆ ನೀಡಿದ್ದಾರೆ.

ನಗರದ ಜಿಲ್ಲಾಡಳಿತ ಭವನದಲ್ಲಿ ಇಂದು ಕರೆಯಲಾಗಿದ್ದ ಕೆ.ಡಿ.ಪಿ. ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು, ಕೊರೊನಾ ಹಿನ್ನೆಲೆಯಲ್ಲಿ ಜಿಲ್ಲೆಯ ತೋಟಗಾರಿಕೆ ಬೆಳೆಗಾರರಿಗೆ ನೀಡಲಾಗಿರುವ 1.63 ಲಕ್ಷ ರೂ. ಅನುದಾನದಲ್ಲಿ 50 ಲಕ್ಷ ರೂ. ರೈತರಿಗೆ ತಲುಪಿಲ್ಲ ಎಂಬ ವಿವರ ಪಡೆದ ನಂತರ ಈ ಸೂಚನೆ ನೀಡಿದ್ದಾರೆ.

ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಲಕ್ಷ್ಮೀಕಾಂತ್ ಬೋಮ್ಮನ್ನರ್ ಮಾತನಾಡಿ, ರೈತರು ಸಾವನ್ನಪ್ಪಿದ ಸಂದರ್ಭದಲ್ಲಿ ಆರ್.ಟಿ.ಸಿ. ಮಕ್ಕಳ ಹೆಸರಿಗೆ ಖಾತೆಯಾಗದೇ ಪರಿಹಾರ ನೀಡಲು ಸಾಧ್ಯವಾಗಿಲ್ಲ. ಅಲ್ಲದೆ ರೈತರು ಜಾತಿ ಪ್ರಮಾಣ ಪತ್ರದಲ್ಲಿ ಆರ್‌ಡಿ ಸಂಖ್ಯೆ ಇಲ್ಲದ ಕಾರಣಕ್ಕಾಗಿ, ಹೊಸದಾಗಿ ಜಾತಿ ಪ್ರಮಾಣ ಪತ್ರ ಪಡೆದು ರೈತರು ಸಲ್ಲಿಸಬೇಕಿದೆ ಎಂದು ಹೇಳಿದರು.

ಸರ್ಕಾರ ನೆರವಿಗಾಗಿ ಬಿಡುಗಡೆ ಮಾಡಿದ ಹಣ ನಮ್ಮ ಖಾತೆಯಲ್ಲೇ ಉಳಿದರೆ ಏನು ಪ್ರಯೋಜನ? ಸಂಬಂಧಿಸಿದ ಅಧಿಕಾರಿಗಳು ಜನರ ಮನೆ ಬಾಗಿಲಿಗೆ ತೆರಳಿ ನೆರವು ಕಲ್ಪಿಸಬೇಕು ಎಂದು (3ನೇ ಪುಟಕ್ಕೆ)

## ಸಿ.ಜಿ. ಆಸ್ಪತ್ರೆಯಲ್ಲಿ ಕೊರೊನೇತರ ಚಿಕಿತ್ಸೆ

ಕೊರೊನಾ ಎರಡನೇ ಅಲೆ ತೀವ್ರತೆ ಈಗ ಕಡಿಮೆಯಾಗಿದೆ. ಜಿಲ್ಲಾ ಸಿ.ಜಿ. ಆಸ್ಪತ್ರೆಯಲ್ಲಿ ಕೊರೊನೇತರ ರೋಗಿಗಳಿಗೆ ಚಿಕಿತ್ಸೆ ನೀಡಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ತಿಳಿಸಿದ್ದಾರೆ. ಇದಕ್ಕೆ ಉತ್ತರಿಸಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಶಸ್ತ್ರಚಿಕಿತ್ಸಾ ಘಟಕವನ್ನು ನವೀಕರಣಗೊಳಿಸಲಾಗಿದೆ. ಬೇರೆ ಆಸ್ಪತ್ರೆಗೆ ರೆಫರೆನ್ಸ್ ನೀಡುವುದನ್ನು ಕಡಿಮೆ ಮಾಡಲು ಅಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕು ಎಂದರು. ಮಹಿಳಾ (3ನೇ ಪುಟಕ್ಕೆ)

## ಎಲ್ಲ ಪಠ್ಯಕ್ರಮಗಳಲ್ಲೂ ಕನ್ನಡ ಕಡ್ಡಾಯ: ಸಚಿವ

ಬೆಂಗಳೂರು, ಜು. 14 - ಕನ್ನಡ ನೆಲದಲ್ಲಿರುವ ಯಾವುದೇ ಪಠ್ಯಕ್ರಮದ ಶಾಲೆಗಳಲ್ಲಿ ಕನ್ನಡ ಭಾಷೆಯನ್ನು ಒಂದು ಭಾಷೆಯನ್ನಾಗಿ ಕಲಿಸುವ ಸಂಬಂಧದ ಕನ್ನಡ ಕಲಿಕಾ ಅಧಿನಿಯಮ-2015ರ ಕಾಯ್ದೆ ಅನುಷ್ಠಾನದಲ್ಲಿ ಯಾವುದೇ ರಾಜಿಯೇ ಇಲ್ಲ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಹೇಳಿದ್ದಾರೆ. (3ನೇ ಪುಟಕ್ಕೆ)


## ಕೇಂದ್ರ ನೌಕರರ ಡಿಎ ಏರಿಕೆ

ನವದೆಹಲಿ, ಜು. 1 4- ಕೇಂದ್ರ ಸರ್ಕಾರಿ ನೌಕರರು ಹಾಗೂ ಪಿಂಚಣಿದಾರರ ತುಟ್ಟಿ ಭತ್ಯೆ ಹಾಗೂ ತುಟ್ಟಿ ಪರಿಹಾರವನ್ನು ಜುಲೈ 1, 2021ರಿಂದ ಮತ್ತೆ ನೆಲೆಗೊಳಿಸಲು ಹಾಗೂ ಶೇ.28ಕ್ಕೆ ಹೆಚ್ಚಿಸಲು ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ.

ಇದರಿಂದಾಗಿ ಬೊಕ್ಕಸಕ್ಕೆ 34,401 ಕೋಟಿ ರೂ.ಗಳ ಹೊರೆಯಾಗಲಿದೆ ಎಂದು (3ನೇ ಪುಟಕ್ಕೆ)

**ಭದ್ರಾ ಜಲಾಶಯ**

ಇಂದಿನ ಮಟ್ಟ : 157 ಅಡಿ 4 ಇಂಚು
ಒಳ ಹರಿವು: 7646 ಕ್ಯೂಸೆಕ್ಸ್
ಹೊರ ಹರಿವು : 783 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 147.9 ಅಡಿ



# ಜಿಲ್ಲೆಯಲ್ಲಿ ಕೊರೊನಾ ಇಳಿಕೆ, ಜನರ ನಿರ್ಲಕ್ಷ್ಯ ಹೆಚ್ಚಳ

## ಪಾಸಿಟಿವಿಟಿ ದರ ಶೇ.1.23ಕ್ಕೆ ಇಳಿಕೆ, ಸಾವಿನ ದರ ಶೇ.7.44ಕ್ಕೆ ಏರಿಕೆ

ದಾವಣಗೆರೆ, ಜು.14- ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಕೊರೊನಾ ಸೋಂಕಿತರ ಸಂಖ್ಯೆ ಇಳಿಕೆಯಾಗುತ್ತಿದ್ದು, ಕಳೆದೊಂದು ವಾರದ ಜಿಲ್ಲೆಯ ಪಾಸಿಟಿವಿಟಿ ದರ ಶೇ.1.23ಕ್ಕೆ ಇಳಿಕೆಯಾಗಿದೆ. ಇದರ ಬೆನ್ನಲ್ಲೇ ಸಾವಿನ ದರವೂ ಶೇ.7.44ಕ್ಕೆ ಏರಿಕೆಯಾಗಿದೆ.

ಸೋಂಕಿತರಿಗೆ ಆಸ್ಪತ್ರೆಗಳಲ್ಲಿಯೇ ಬೆಡ್‌ಗಳ ಲಭ್ಯತೆ ಹೆಚ್ಚಾಗಿರುವುದರಿಂದ ಕೋವಿಡ್ ಕೇರ್ ಸೆಂಟರ್‌ಗಳನ್ನು ತೆರವುಗೊಳಿಸಲಾಗುತ್ತಿದೆ. ಸದ್ಯ ನಗರದ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿರುವ ಒಂದು ಕೋವಿಡ್ ಸೆಂಟರ್ ಹಾಗೂ ಹೊನ್ನಾಳಿ ತಾಲ್ಲೂಕು ಅರಬಗಟ್ಟೆಯಲ್ಲಿರುವ ಒಂದು ಕೋವಿಡ್ ಸೆಂಟರ್‌ಗಳಲ್ಲಿ ಮಾತ್ರ ಬೆರಳೆಣಿಕೆಯಷ್ಟು ಸೋಂಕಿತರಿದ್ದಾರೆ.

ಕೊರೊನಾ ಎರಡನೇ ಅಲೆ ಆರಂಭವಾಗಿ, ನಗರ ಸೇರಿದಂತೆ ಗ್ರಾಮೀಣ ಪ್ರದೇಶದಲ್ಲೂ ಸೋಂಕು ದಾಂಗುಡಿ ಇಟ್ಟಾಗ, ಸೋಂಕಿನ ಸರಪಳಿ ಮುರಿಯಲು ಉದ್ದೇಶಿಸಿದ ಜಿಲ್ಲಾಡಳಿತ ಕೋವಿಡ್ ಕೇರ್ ಸೆಂಟರ್‌ಗಳನ್ನು ಹೆಚ್ಚಾಗಿ ತೆರೆದು ಸೋಂಕಿತರಿಗೆ ಚಿಕಿತ್ಸೆ ನೀಡಲು ಉದ್ದೇಶಿಸಿತ್ತು.

ಈ ಹಿನ್ನೆಲೆಯಲ್ಲಿ ದಾವಣಗೆರೆ ನಗರ ಹಾಗೂ ತಾಲ್ಲೂಕುಗಳು ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 28 ಕೋವಿಡ್ ಕೇರ್ ಸೆಂಟರ್‌ಗಳನ್ನು ಆರಂಭಿಸಲಾಗಿತ್ತು. ದಾವಣಗೆರೆ ನಗರದಲ್ಲಿನ ತರಳಬಾಳು ಸಂಸ್ಥೆಗೆ ಸೇರಿದ್ದ ಒಂದು ಹಾಸ್ಟೆಲ್, ಹರಿಹರದಲ್ಲಿ ಶ್ರೀ ಶೈಲ ಮಠದಿಂದ ಒಂದು ಕೋವಿಡ್ ಕೇರ್ ಸೆಂಟರ್, ಅಲ್ಪಸಂಖ್ಯಾತರಿಗಾಗಿ ತಾಜ್ ಪ್ಯಾಲೇಸ್ (2ನೇ ಪುಟಕ್ಕೆ)

**ಜಿಲ್ಲೆಯಲ್ಲಿದ್ದ 28 ಕೋವಿಡ್ ಸೆಂಟರ್‌ಗಳ ಪೈಕಿ 2 ರಲ್ಲಿ ಮಾತ್ರ ಬೆರಳೆಣಿಕೆಯಷ್ಟು ಸೋಂಕಿತರು**

**ಜಿಲ್ಲೆಯಲ್ಲಿ ಈ ವರೆಗೆ 6,05,429 ಜನರಿಗೆ ಲಸಿಕೆ ನೀಡಲಾಗಿದೆ.**



ದಾವಣಗೆರೆ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದ ಸಮೀಪ ಗ್ರಾಮೀಣ ಪ್ರದೇಶದಿಂದ ಬಂದ ಕುಟುಂಬ ಮಾಸ್ಕ್ ಧರಿಸದೆ ಚಪ್ಪಲಿ ಖರೀದಿಗೆ ಧಾವಿಸುತ್ತಿರುವುದು.

## ಆಯುಷ್ ಯೋಜನೆ ಐದು ವರ್ಷ ವಿಸ್ತರಣೆ

ನವದೆಹಲಿ, ಜು. 14 - ಕೇಂದ್ರ ಸರ್ಕಾರದಿಂದ ಪ್ರಾಯೋಜಿತವಾದ ರಾಷ್ಟ್ರೀಯ ಆಯುಷ್ ಮಿಷನ್ ಅದನ್ನು ಇನ್ನೂ ಐದು ವರ್ಷಗಳ ಕಾಲ 2026ರವರೆಗೆ ವಿಸ್ತರಿಸಲು ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ

**2021-22ರಲ್ಲಿ 54,618 ಕೋಟಿ ರೂ. ಹೂಡಿಕೆಗೆ ಕ್ರಮ**

ಈ ಬಗ್ಗೆ ವಿವರ ನೀಡಿರುವ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್, ಈ ಯೋಜನೆ ಏಪ್ರಿಲ್ 1, 2021ರಿಂದ ಮಾರ್ಚ್ 31, 2026ರವರೆಗೆ ಮುಂದುವರೆಯಲಿದೆ ಎಂದಿದ್ದಾರೆ. ಈ ಯೋಜನೆಗೆ ಸೆಪ್ಟೆಂಬರ್ 15, (2ನೇ ಪುಟಕ್ಕೆ)

## ಒಬಿಸಿ ಒಳ ಮೀಸಲಾತಿ ಆಯೋಗದ ಅವಧಿ ವಿಸ್ತರಣೆ

ನವದೆಹಲಿ, ಜು. 14 - ಕೇಂದ್ರದ ಒ.ಬಿ.ಸಿ. ಪಟ್ಟಿಯಲ್ಲಿ ಒಳ ಮೀಸಲಾತಿಯನ್ನು ನಿಗದಿ ಪಡಿಸಲು ರೂಪಿಸಲಾಗಿರುವ ಆಯೋಗದ ಅವಧಿಯನ್ನು ಕೇಂದ್ರ ಸಂಪುಟ ಆರು ತಿಂಗಳ ಕಾಲ ವಿಸ್ತರಿಸಿದೆ.

ಆಯೋಗದ ಅವಧಿಯನ್ನು ಜನವರಿ 31, 2022ರವರೆಗೆ ವಿಸ್ತರಿಸಲಾಗಿದೆ. ಇದು ಆಯೋಗಕ್ಕೆ ನೀಡಲಾಗುತ್ತಿರುವ ಹನ್ನೊಂದನೇ ವಿಸ್ತರಣೆಯಾಗಿದೆ.

## ಕಿಟ್‌ಗೆ ನೂಕುನುಗ್ಗಲು: ಲಾಠಿ

ಹರಿಹರ, ಜೂ.14- ನಗರದ ಎಪಿಎಂಸಿ ಆವರಣ ದಲ್ಲಿ ಕಾರ್ಮಿಕ ಇಲಾಖೆ ವತಿಯಿಂದ ಕಾರ್ಮಿಕರಿಗೆ ಆಹಾರದ ಕಿಟ್ ವಿತರಿಸುವಾಗ, ನೂಕುನುಗ್ಗಲು ಹೆಚ್ಚಾದ ಕಾರಣ ಪೊಲೀಸರು ಜನರನ್ನು ಚದುರಿಸಲು ಲಾಠಿ ಬೀಸಿದ ಘಟನೆ ಇಂದು ನಡೆದಿದೆ.

ಲಾಕ್‌ಡೌನ್‌ನಿಂದ ಕಾರ್ಮಿಕರಿಗೆ ಕೆಲಸವಿಲ್ಲದೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ರಾಜ್ಯ ಸರ್ಕಾರ ಎಲ್ಲಾ ಕಾರ್ಮಿಕರ ಕುಟುಂಬಕ್ಕೆ ಆಹಾರದ ಕಿಟ್ ನೀಡುವುದಕ್ಕೆ ಮುಂದಾಗಿದೆ. ಅದರ ಅನ್ವಯ ಹರಿಹರ ತಾಲ್ಲೂಕಿನಲ್ಲಿರುವ 17,500 ಕಾರ್ಮಿಕರಲ್ಲಿ (3ನೇ ಪುಟಕ್ಕೆ)

## 5 ಕೋಟಿ ವೆಚ್ಚದಲ್ಲಿ ಲೇಸರ್ ಷೋ

ದಾವಣಗೆರೆ, ಜು.14- ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಅವರು ನಗರದ ಗಾಜಿನ ಮನೆಗೆ ಮ್ಯೂಸಿಕಲ್ ಫೌಂಟೇನ್ ಹಾಗೂ ಲೇಸರ್ ಷೋ ಅಳವಡಿಸುವ 5 ಕೋಟಿ ರೂ.ಗಳ ಕಾಮಗಾರಿಗೆ ಇಂದು ಶಂಕುಸ್ಥಾಪನೆ ನೆರವೇರಿಸಿದರು.

ಸ್ಮಾರ್ಟ್ ಸಿಟಿ ವತಿಯಿಂದ ಈ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಇದೇ ವೇಳೆ 3.5 ಕೋಟಿ ರೂ. ವೆಚ್ಚದಲ್ಲಿ ವಿವಿಧ ಶಾಲೆಗಳಿಗೆ ಕಟ್ಟಡಗಳನ್ನು ನಿರ್ಮಿಸುವ ಕಾಮಗಾರಿಗಳಿಗೂ ಶಂಕುಸ್ಥಾಪನೆ ನೆರವೇರಿಸಲಾಗಿದೆ.

ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಸಚಿವರು, ಗಾಜಿನ ಮನೆ ಆವರಣದಲ್ಲಿ ನಿರ್ಮಿಸಿರುವ ಲೇಸರ್ ಷೋ (3ನೇ ಪುಟಕ್ಕೆ)




**18ನೇ ವರ್ಷದ ಪುಣ್ಯಸ್ಮರಣೆ**

ಕಾಯಕ ಯೋಗಿಗಳೂ,
ಪ್ರಗತಿಪರ ಕೃಷಿಕರೂ, ಪ್ರಸಿದ್ಧ ವರ್ತಕರೂ,
ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದ

**ಲಿಂ|| ಶ್ರೀ ಶಾಮನೂರು ಬಸವರಾಜಪ್ಪ**

ಇವರು ಶಿವೈಕ್ಯರಾಗಿ ಇಂದಿಗೆ ಹದಿನೆಂಟು ವರ್ಷಗಳಾದವು.
ಸದಾ ಅವರ ಆದರ್ಶ, ಮಾರ್ಗದರ್ಶನಗಳ ಸ್ಮರಣೆಯಲ್ಲಿರುವ,

ಪತ್ನಿ : ಶ್ರೀಮತಿ ಸುಶೀಲಮ್ಮ ಬಸವರಾಜಪ್ಪ
ಸಹೋದರ : ಡಾ. ಶಾಮನೂರು ಶಿವಶಂಕರಪ್ಪ
ಶಾಸಕರು ಮತ್ತು ಮಾಜಿ ಸಚಿವರು, ಗೌರವ ಕಾರ್ಯದರ್ಶಿಗಳು, ಬಾಪೂಜಿ ವಿದ್ಯಾಸಂಸ್ಥೆ.

- ಡಾ|| ಎಸ್.ಬಿ.ಮುರುಗೇಶ್, ಜ್ಯೋತಿ ಮುರುಗೇಶ್, ಅಲಂಕೃತಾ
- ಶ್ರೀಮತಿ ಸಮತ, ಶ್ರೀ ಆಕರ್ಷ್, ಶಾಮನೂರು.
- ಶ್ರೀಮತಿ ರತ್ನಾ, ಜಿ.ಎಸ್.ಪರಮೇಶ್ವರಗೌಡ್ರು, ಸಂದೀಪ್, ಶ್ವೇತಾ, ಸ್ವರೂಪ್, ಪ್ರಿಯಾ
- ಶ್ರೀಮತಿ ಉಮಾ, ಡಾ|| ಧನ್ಯಪ್ರಕಾಶ್, ಡಾ|| ಸರ್ವೇಶ್, ಚಿ|| ಶ್ರಿಕಾ
- ಶ್ರೀಮತಿ ವೀಣಾ, ಕಿಶೋರ್‌ಗೌಡ, ಚಿ|| ಸೇಜಲ್
- ಶ್ರೀಮತಿ ಅನುಪಮಾ, ಚಂದ್ರಶೇಖರ್, ಚಿ|| ಸಮೃದ್, ಸಮ್ಮಿತ
- ಶ್ರೀಮತಿ ಡಾ|| ಶೈಲಾ, ಡಾ|| ಅರ್ಪಣ್ ಭಟ್ಟಾಚಾರ್ಯ, ಚಿ|| ಶ್ರೇಯಶಿ, ಅಮರ್ತ್ಯ
- ಶ್ರೀಮತಿ ಮೀನಾ, ಡಾ|| ಶರಣ್ ಪಾಟೀಲ್, ಚಿ| ಸೃಷ್ಟಿ, ಸಂಸ್ಕೃತಿ
- ಶ್ರೀ ಎಸ್.ಎಸ್.ಬಕ್ಕೇಶ್, ಪ್ರೀತಿ ಬಕ್ಕೇಶ್, ಚಿ|| ಅಶಿಕ್, ಸಮಧ್ಯ, ಅಕ್ಷತಾ, ಅದಿತ್
- ಶ್ರೀ ಎಸ್.ಎಸ್. ಗಣೇಶ್, ರೇಖಾ ಗಣೇಶ್, ಅಭಿಜಿತ್, ಸ್ವಾತಿ, ಆಂಚಲ್ ಪ್ರಶಾಂತ್ ಜೆ.ಶೆಟ್ಟರ್, ಚಿ|| ಅಖಿಲಾ
- ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್, ಪ್ರಭಾ ಮಲ್ಲಿಕಾರ್ಜುನ್ ಚಿ|| ಸಮರ್ಥ್, ಶ್ರೇಷ್ಠಾ, ಶಿವ
- ಶ್ರೀಮತಿ ಡಾ|| ಮಂಜುಳ, ಡಾ|| ಶಿವಶಂಕರ್, ಸಂಜನ, ಸೆಜುತಿ,
- ಶ್ರೀಮತಿ ಸುಧಾ, ರಾಜೇಂದ್ರ ಪಾಟೀಲ್, ಚಿ|| ಸುಪ್ರಿಯಾ

ಹಾಗೂ ಶಾಮನೂರು ಮನೆತನದ ಸಮಸ್ತ ಸದಸ್ಯರು, ಬಂಧುಗಳು-ಮಿತ್ರರು ಹಾಗೂ
ಶಾಮನೂರು ಸಮೂಹದ ಕೈಗಾರಿಕೆಗಳು, ವಾಣಿಜ್ಯ ಸಂಸ್ಥೆಗಳ ಸಮಸ್ತ ಸಿಬ್ಬಂದಿಗಳು ಹಾಗೂ ಹಿತೈಷಿಗಳು.



# ಸಚಿವರ, ಜಿಲ್ಲಾಧಿಕಾರಿಗಳ ಹೇಳಿಕೆ ದಿಕ್ಕು ತಪ್ಪಿಸುವ ಪ್ರಯತ್ನ

ಹರಿಹರ, ಜು.14- ನಗರಕ್ಕೆ ವೈದ್ಯಕೀಯ ಕಾಲೇಜು ಸ್ಥಾಪನೆ ವಿಚಾರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಮತ್ತು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಜಮೀನು, ನೀರು ಇದ್ದ ತಕ್ಷಣ ಸರ್ಕಾರದ ನಿಬಂಧನೆಗಳನ್ನು ಮೀರಿ ವೈದ್ಯಕೀಯ ಕಾಲೇಜು ಸ್ಥಾಪನೆ ಮಾಡಲಿಕ್ಕೆ ಬರುವುದಿಲ್ಲ ಎಂದು ಹೇಳಿರುವ ಹೇಳಿಕೆ, ಸಾರ್ವಜನಿಕರ ಹೋರಾಟದ ದಿಕ್ಕು ತಪ್ಪಿಸುವ ಪ್ರಯತ್ನವಾಗಿರಬಹುದು ಎಂದು ಭಾಸವಾಗುತ್ತದೆ ಎಂದು ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಹೇಳಿದರು.

ನಗರದ ಜೆಡಿಎಸ್ ಕಚೇರಿಯ ಸಭಾಂಗಣದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ವೈದ್ಯಕೀಯ ಕಾಲೇಜು ಸ್ಥಾಪನೆಗೆ ಇಳಿದಿರುವ ಹೋರಾಟಗಾರರು ಹತಾಶೆ ಭಾವನೆ ಹೊಂದುವುದು ಬೇಡ. ಸರ್ವ ಜನಾಂಗದ ಬೆಂಬಲ ನಮಗೆ ಇದೆ. ನಿನ್ನೆಯ ಸಭೆಯಲ್ಲಿ ಹಾಜರಿದ್ದ ವಿವಿಧ ಮಠಗಳ ಶ್ರೀಗಳ ನೇತೃತ್ವದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಬಳಿ ನಿಯೋಗ ತೆರಳಿ ಅವರ ಮನವೊಲಿಸಿ ನಗರದಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಮುಂದಾಗೋಣ ಎಂದು ಅವರು ತಿಳಿಸಿದರು.

ತಾಲ್ಲೂಕಿನ ವಿವಿಧ ಮಠದ ಶ್ರೀಗಳ ನೇತೃತ್ವದಲ್ಲಿ ಬೆಳ್ಳೂಡಿ ಕನಕ ಗುರುಪೀಠದ ಶಾಖಾ ಮಠದಲ್ಲಿ ನಿನ್ನೆ ನಡೆದ ಮಹತ್ವದ ಸಭೆಯಲ್ಲಿ ಶ್ರೀಗಳು ಪಾಲ್ಗೊಂಡು ಬೆಂಬಲ ವ್ಯಕ್ತಪಡಿಸಿರುವುದು ಹೊಸ ಇತಿಹಾಸ ಸೃಷ್ಟಿ ಮಾಡಿದಂತೆಯಾಗಿದೆ. ಪೂಜ್ಯರು ಅವರ ಸಮುದಾಯದ ಒಳಿತಿಗಾಗಿ ಪಾದಯಾತ್ರೆ ಮಾಡಿದ್ದನ್ನು ನಾವು ಕಂಡಿದ್ದೇವೆ. ಆದರೆ ಎಲ್ಲಾ ವರ್ಗದವರ ಅಭಿವೃದ್ಧಿಯ ಒಳಿತಿಗಾಗಿ ಎಲ್ಲರೂ ಒಂದಾಗಿ ವೇದಿಕೆಯಲ್ಲಿ ನಗರಕ್ಕೆ ವೈದ್ಯಕೀಯ ಕಾಲೇಜು ವಿಚಾರದಲ್ಲಿ ಕೂಡಿಕೊಂಡು ಸಭೆಯನ್ನು ಮಾಡಿ ಬೆಂಬಲಕ್ಕೆ ನಿಂತಿದ್ದು ಇತಿಹಾಸ. ಕ್ಷೇತ್ರದ ಎಲ್ಲಾ ಶ್ರೀಗಳು ಒಟ್ಟಿಗೆ ಸರ್ಕಾರದ ಗಮನವನ್ನು ಸೆಳೆಯಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದು ಸ್ವಾಗತಾರ್ಹ. ಸಚಿವರು, ಸಂಸದರು, ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಸಭೆಯನ್ನು ಮಾಡಿದ್ದು ಹೋರಾಟಗಾರರಿಗೆ ಹುರುಪು ತಂದಿದೆ ಎಂದು ಅವರು ಹೇಳಿದರು.



ಸಚಿವರ, ಜಿಲ್ಲಾಧಿಕಾರಿಗಳ ಹೇಳಿಕೆಗಳಿಂದ ಹೋರಾಟಗಾರರಿಗೆ ಬೇಜಾರು ಮತ್ತು ಹಿನ್ನಡೆ ತಂದಿದೆ ಎಂದು ಸಾರ್ವಜನಿಕರು ಭಾವಿಸಿದ್ದಾರೆ. ಆದರೆ, ಹೋರಾಟದ ಹಾದಿಯಲ್ಲಿ ಸಾಗುವವರು ಮರಳಿ ಯತ್ನ ಮಾಡಬೇಕು. ಒಂದೇ ಕೂಗಿಗೆ ಸರ್ಕಾರ ಕಣ್ಣು ತೆರೆಯುವ ಕಾಲ ದೂರವಾಗಿದೆ. ಹತಾಶೆ ಹೊಂದದೆ ನಿರಂತರವಾಗಿ ಹೋರಾಟ ಮಾಡಿದಾಗ ಫಲ ದೊರೆಯುತ್ತದೆ. ಜಿಲ್ಲಾಧಿಕಾರಿಗಳ ಮೂಲಕ ತಾಂತ್ರಿಕ ವ್ಯವಸ್ಥೆ ಬಗ್ಗೆ ಹೇಳಿಕೆಯನ್ನು ಕೊಡಿಸಿ ಹರಿಹರ ನಗರದಲ್ಲಿ ಮಾಡಲಿಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಮತ್ತು ಸಚಿವರ ಮೂಲಕ ವೈದ್ಯಕೀಯ ಕಾಲೇಜು ಸ್ಥಾಪನೆಗೆ 1,200 ಬೆಡ್ ಹಾಸಿಗೆ ಬೇಕು. 400 ರಿಂದ 500 ಕೋಟಿ ಇರುವ ಬಂಡವಾಳದಾರರು ಬೇಕು. ಹಲವು ರೀತಿಯಲ್ಲಿ ವೈದ್ಯಕೀಯ ವ್ಯವಸ್ಥೆಗಳು ಬೇಕು ಎಂದು ಹೇಳಿದ್ದಾರೆ.

ಈ ರೀತಿಯಲ್ಲಿ ಸೌಲಭ್ಯಗಳು ಇರದೇ ಇದ್ದರೂ ಸಹ ಹಾವೇರಿ, ಚಿಕ್ಕಬಳ್ಳಾಪುರದಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಸರ್ಕಾರ ಮುಂದಾಗಿದೆ. ನೇತ್ರಾವತಿ ತಿರುವು ಅಭಿವೃದ್ಧಿಗೆ 12 ಸಾವಿರ ಕೋಟಿ ರೂ., ಪಕ್ಕದ ಹೊನ್ನಾಳಿ ನಗರದ ಅಭಿವೃದ್ಧಿಗೆ 500 ಕೋಟಿ, ಜಗಳೂರು ತಾಲ್ಲೂಕಿನ ಅಭಿವೃದ್ಧಿಗೆ 600 ಕೋಟಿ ಹಣ ಹಾಕಿ ಅಭಿವೃದ್ಧಿ ಪಡಿಸಿದಂತೆ ಇಲ್ಲಿಯೂ ಕಾಲೇಜು ಸ್ಥಾಪನೆಗೆ ಹಣವನ್ನು ಬಳಸಿ ಅಭಿವೃದ್ಧಿ ಮಾಡಲಿ. ಅಲ್ಲಿಗೆ ಒಂದು ನ್ಯಾಯ ಇಲ್ಲಿಗೊಂದು ನ್ಯಾಯವೇ? ನಾಯಕರಿಗೆ ಮಾಡಬೇಕು ಎಂದು ಮನಸ್ಸು ಇರಬೇಕು. ಇಲ್ಲದೇ ಹೋದರೆ ಸಾರ್ವಜನಿಕವಾಗಿ ಒಪ್ಪಿಕೊಳ್ಳಬೇಕು.

ಯಾವುದೇ ವ್ಯವಸ್ಥೆಗೆ ಸಿದ್ಧರಾಗಬೇಕಾದರೆ ಅದಕ್ಕೆ ಶ್ರಮಬೇಕಾಗುತ್ತದೆ. ಮತ್ತೊಮ್ಮೆ ಸಚಿವರು ಪುನರ್ ಪರಿಶೀಲಿಸುವ ಕೆಲಸ ಮಾಡಬೇಕು. ಸಂಸದರಿಗೆ ಹರಿಹರ ತಾಲ್ಲೂಕಿನ ಜನತೆ ರಾಜಕೀಯ ಶಕ್ತಿಯನ್ನು ಕೊಟ್ಟಿದ್ದಾರೆ. ಅವರು ಮನಸ್ಸು ಮಾಡಿ ಮುಕ್ತ ಮನಸ್ಸಿನಿಂದ ಹರಿಹರಕ್ಕೆ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಮುಂದಾಗಬೇಕಿದೆ ಎಂದರು. ಸರ್ಕಾರ ಖಾಸಗಿ ಸಹಭಾಗಿತ್ವದಲ್ಲಿ ಮಾಡುವ ನಿರ್ಧಾರ ಮಾಡುವುದರಿಂದ ತೊಂದರೆ ಆಗುತ್ತದೆ. ಸರ್ಕಾರದ ಹಣದಲ್ಲಿ ಸ್ಥಾಪನೆ ಮಾಡಿ ಬಡವರಿಗೆ ಉಚಿತವಾಗಿ ವೈದ್ಯಕೀಯ ಶಿಕ್ಷಣ ಕೊಡುವ ನಿಟ್ಟಿನಲ್ಲಿ ಹೆಜ್ಜೆಗಳನ್ನು ಹಾಕಬೇಕು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ, ದೀಟೂರು ಶೇಖರಪ್ಪ, ನಗರಸಭೆ ಸದಸ್ಯರಾದ ಆರ್.ಸಿ. ಜಾವೇದ್, ದಿನೇಶ್ ಬಾಬು, ಮುಖಂಡರಾದ ಅಂಗಡಿ ಮಂಜುನಾಥ್, ಸುರೇಶ್ ಚಂದಾಪೂರ್, ನಂಜಪ್ಪ, ಅಲ್ತಾಫ್, ಮನಸೂರು ಮದ್ದಿ, ಮಾರುತಿ ಬೇಡರ್, ಅಮರಾವತಿ ನಾಗರಾಜ್, ಆಸ್ರಾ ಖಾನ್, ರಾಜನಹಳ್ಳಿ ಪ್ರಕಾಶ್, ಸಚ್ಚಿನ್ ಕೊಂಡಜ್ಜಿ, ಡಿ. ಸಂಗಮೇಶ್, ಮಂಜಮ್ಮ ಇನ್ನಿತರರರು ಹಾಜರಿದ್ದರು.

### ಬಿ.ಪಿ. ಹರೀಶ್ ಒತ್ತಡ ಹಾಕಬಹುದಿತ್ತು

" ತೀರ್ಮಾನ ತೆಗೆದುಕೊಳ್ಳುವ ಅಧಿಕಾರದಲ್ಲಿದ್ದವರಿಗೆ ಇರುತ್ತದೆ. ಸೋತವರು ಸಲಹೆ ಕೊಡಬಹುದು ಮತ್ತು ಸರಿದಾರಿಯನ್ನು ತೋರಿಸಬಹುದು. ಅಂತಿಮವಾಗಿ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಸರ್ಕಾರಕ್ಕೆ ಇರುತ್ತದೆ. ಮಾಜಿ ಶಾಸಕ ಬಿ.ಪಿ. ಹರೀಶ್ ಈ ಸಭೆಯಲ್ಲಿ ಹಾಜರಿದ್ದರು. ಅವರು ಹೆಚ್ಚು ಒತ್ತಡವನ್ನು ಹಾಕಬಹುದಿತ್ತು. ಭೈರನಪಾದ ಹೋರಾಟದ ಸಮಯದಲ್ಲಿ ಹೇಳಿದಂತೆ ವೈದ್ಯಕೀಯ ಕಾಲೇಜು ಸ್ಥಾಪನೆ ಮಾಡದೆ ಇದ್ದರೆ ಬೆಂಗಳೂರಿನವರೆಗೆ ಪಾದಯಾತ್ರೆ ಮಾಡುವುದಾಗಿ ಮತ್ತು ಪಕ್ಷವನ್ನು ತೊರೆಯುವುದಾಗಿ ಹೇಳಬಹುದಿತ್ತು. ಅದಕ್ಕೇ ನಾನು ಹೇಳಿದ್ದು 'ಇಚ್ಛಾಶಕ್ತಿ ಕೊರತೆ ಇದ್ದರೆ ಯಾವುದೇ ಅಭಿವೃದ್ಧಿ ಆಗುವುದು ಕಷ್ಟ' ಎಂದು.

**- ಹೆಚ್.ಎಸ್. ಶಿವಶಂಕರ್**
ಮಾಜಿ ಶಾಸಕರು, ಹರಿಹರ.

# ಆಯುಷ್ ಯೋಜನೆ ಐದು ವರ್ಷ ವಿಸ್ತರಣೆ

**(1ನೇ ಪುಟದಿಂದ)** 2014ರಲ್ಲಿ ಚಾಲನೆ ನೀಡಲಾಗಿತ್ತು. ಸಾರ್ವತ್ರಿಕ ಆರೋಗ್ಯ ಸೇವೆಯನ್ನು ಕಡಿಮೆ ವೆಚ್ಚದಲ್ಲಿ ಒದಗಿಸುವುದು ಆಯುಷ್ ಮಿಷನ್ ಉದ್ದೇಶವಾಗಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಈ ಯೋಜನೆ ಮೂಲಕ ಆಯುಷ್ ಸೇವೆ ಒದಗಿಸಲಾಗುತ್ತಿದೆ.

ಈ ಯೋಜನೆಯ ಅನ್ವಯ 12,500 ಆಯುಷ್ ಆರೋಗ್ಯ ಕೇಂದ್ರಗಳನ್ನು ತೆರೆಯಲಾಗಿದೆ.

ಪಶು ಸಂಗೋಪನೆ ಹಾಗೂ ಹೈನುಗಾರಿಕೆ ಇಲಾಖೆಯ ಯೋಜನೆಗಳನ್ನು ಮೂರು ವಿಭಾಗಗಳಲ್ಲಿ ಒಗ್ಗೂಡಿಸಲು ಕೇಂದ್ರ ಸಂಪುಟದ ಆರ್ಥಿಕ ವ್ಯವಹಾರಗಳ ಸಮಿತಿ ನಿರ್ಧರಿಸಿದೆ. 2021-22ರಲ್ಲಿ 54,618 ಕೋಟಿ ರೂ.ಗಳ ಹೂಡಿಕೆಯನ್ನು ಈ ವಲಯಕ್ಕೆ ಪಡೆಯಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ.

ರಾಷ್ಟ್ರೀಯ ಗೋಕುಲ್ ಮಿಷನ್, ರಾಷ್ಟ್ರೀಯ ಡೈರಿ ಅಭಿವೃದ್ಧಿ ಯೋಜನೆ, ರಾಷ್ಟ್ರೀಯ ಜಾನುವಾರು ಮಿಷನ್, ಜಾನುವಾರು ಗಣತಿ ಹಾಗೂ ಮಾದರಿ ಸಂಗ್ರಹಗಳು ಮೊದಲ ವಿಭಾಗದಲ್ಲಿ ಬರಲಿವೆ.

ಎರಡನೇ ವಿಭಾಗದಲ್ಲಿ ರೋಗ ನಿಯಂತ್ರಣಕ್ಕೆ ಸಂಬಂಧಿಸಿದ ಯೋಜನೆಗಳು ಬರಲಿವೆ. ಮೂರನೇ ವಿಭಾಗದಲ್ಲಿ ಮೂಲಭೂತ ಅಭಿವೃದ್ಧಿ ನಿಧಿ ಬರಲಿದೆ. ಪಶುಸಂಗೋಪನಾ ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಧಿ ಹಾಗೂ ಹೈನುಗಾರಿಕೆ ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಧಿಗಳನ್ನು ಒಗ್ಗೂಡಿಸಿ ಈ ವರ್ಗದಲ್ಲಿ ತರಲು ಸರ್ಕಾರ ನಿರ್ಧರಿಸಿದೆ.

ಕೇಂದ್ರ ಸರ್ಕಾರದಿಂದ ಪ್ರಾಯೋಜಿತವಾದ ನ್ಯಾಯಾಂಗದ ಮೂಲಭೂತ ಸೌಲಭ್ಯ ಕಲ್ಪಿಸುವ ಯೋಜನೆಯನ್ನು ಐದು ವರ್ಷ ಕಾಲ ವಿಸ್ತರಿಸಲೂ ಸಹ ಕೇಂದ್ರ ಸಂಪುಟ ನಿರ್ಧರಿಸಿದೆ. 2021ರಿಂದ 2026ರ ನಡುವೆ ಈ ಯೋಜನೆಗಾಗಿ 9 ಸಾವಿರ ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುವುದು. ಇದರಲ್ಲಿ ಕೇಂದ್ರ ಸರ್ಕಾರದ ಪಾಲು 5,357 ಕೋಟಿ ರೂ. ಆಗಿರಲಿದೆ.

# ಭರವಸೆ ನೀಡುವ ಬಿಜೆಪಿಯಿಂದ ದೇಶದ ಅಭಿವೃದ್ಧಿ ಸಾಧ್ಯವಿಲ್ಲ



### ಶಾಸಕ ಎಸ್. ರಾಮಪ್ಪ

ಮಲೇಬೆನ್ನೂರು, ಜು.14- ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿರುವ ಬಿಜೆಪಿ ಸರ್ಕಾರ ಜನರ ನಂಬಿಕೆ ಕಳೆದುಕೊಂಡಿದೆ ಎಂದು ಶಾಸಕ ಎಸ್. ರಾಮಪ್ಪ ಹೇಳಿದರು.

ಯಲವಟ್ಟಿ ಗ್ರಾಮದ ಜೆಡಿಎಸ್ ಮುಖಂಡ ಅನಂತ್‌ನಾಯ್ಕ್ ನೇತೃತ್ವದಲ್ಲಿ ಹಲವರನ್ನು ಕಾಂಗ್ರೆಸ್ ಪಕ್ಷಕ್ಕೆ ಬರಮಾಡಿಕೊಂಡ ಸಂದರ್ಭದಲ್ಲಿ ಅವರು ಮಾತನಾಡಿದರು.

ಬರೀ ಸುಳ್ಳು ಭರವಸೆ ನೀಡುವ ಬಿಜೆಪಿಯಿಂದ ದೇಶ, ರಾಜ್ಯ ಹಾಗೂ ಜನರ ಅಭಿವೃದ್ಧಿ ಸಾಧ್ಯವಿಲ್ಲ. ಜಿ.ಪಂ., ತಾ.ಪಂ. ಚುನಾವಣೆಯಲ್ಲಷ್ಟೇ ಅಲ್ಲ, ಮುಂಬರುವ ವಿಧಾನಸಭೆ ಚುನಾವಣೆಯಲ್ಲೂ ಕಾಂಗ್ರೆಸ್ ಸ್ಪಷ್ಟ ಬಹುಮತ ಪಡೆಯಲಿದೆ ಎಂದು ಶಾಸಕರು ವಿಶ್ವಾಸ ವ್ಯಕ್ತಪಡಿಸಿದರು.


ರಾಜ್ಯದಲ್ಲಿ ಬಿಜೆಪಿ ಸರ್ಕಾರ ದ್ವೇಷದ ರಾಜಕಾರಣ ಮಾಡುತ್ತಿದ್ದು, ನಮ್ಮ ತಾಲ್ಲೂಕಿಗೆ ಸಮ್ಮಿಶ್ರ ಸರ್ಕಾರ ನೀಡಿದ್ದ ಅನುದಾನವನ್ನು ತಡೆ ಹಿಡಿದಿದೆ. ನಮ್ಮದೇ ಸರ್ಕಾರ ಇದ್ದಿದ್ದರೆ ಈ ರೀತಿ ಆಗುತ್ತಿರಲಿಲ್ಲ. ಆದ್ದರಿಂದ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಪಕ್ಷದ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಸಂಕಲ್ಪ ಮಾಡಬೇಕೆಂದು ರಾಮಪ್ಪ ಮನವಿ ಮಾಡಿದರು.

ಅನಂತ್‌ನಾಯ್ಕ ಮಾತನಾಡಿ, ನಾನು ಟಿಕೆಟ್ ಬಯಸಿ ಕಾಂಗ್ರೆಸ್ ಸೇರಿಲ್ಲ. ಕಾಂಗ್ರೆಸ್ ತತ್ವ, ಸಿದ್ಧಾಂತ ಒಪ್ಪಿ ಬಂದಿದ್ದೇನೆ. ನಾನು ಭಾನುವಳ್ಳಿ ಜಿ.ಪಂ. ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದು, ಟಿಕೆಟ್ ಕೊಟ್ಟರೆ ಸ್ಪರ್ಧಿಸುತ್ತೇನೆ. ಇಲ್ಲದಿದ್ದರೆ ಪಕ್ಷದ ಅಭ್ಯರ್ಥಿ ಗೆಲುವಿಗೆ ಶ್ರಮಿಸುತ್ತೇನೆ ಎಂದರು.

ಕಾಂಗ್ರೆಸ್ ಮುಖಂಡರಾದ ವೈ. ವಿರೂಪಾಕ್ಷಪ್ಪ, ಎಸ್.ಜಿ. ಪರಮೇಶ್ವರಪ್ಪ, ಜಿಗಳಿ ಆನಂದಪ್ಪ, ಗಂಗನರಸಿ ನಾಗೇಂದ್ರಯ್ಯ, ಕೆ.ಬಿ. ಬಸವರಾಜಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಎಲ್.ಬಿ. ಹನುಮಂತಪ್ಪ, ಯಲವಟ್ಟಿಯ ಅಜ್ಜನಾಯ್ಕ ಮಾತನಾಡಿದರು.

ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಪಿ.ಎಸ್. ಹನುಮಂತಪ್ಪ, ಯಲವಟ್ಟಿಯ ಖಲಂದರ್, ಚಮನ್‌ಸಾಬ್, ಹೊರಟ್ಟಿ ರಾಜು, ಮಲೇಬೆನ್ನೂರಿನ ಪಿ.ಆರ್.ಕುಮಾರ್ ಇನ್ನಿತರರಿದ್ದರು.

## ಸ.ನೌ.ಓ ಜಿಲ್ಲಾ ಘಟಕಕ್ಕೆ ಶ್ರೀನಿವಾಸ್ ಉಪಾಧ್ಯಕ್ಷ



ದಾವಣಗೆರೆ, ಜು.14- ಸರ್ಕಾರಿ ನೌಕರರ ಒಕ್ಕೂಟದ ಸಮಾರಂಭದಲ್ಲಿ ಜಿಲ್ಲಾ ಘಟಕದ ಉಪಾಧ್ಯಕ್ಷರನ್ನಾಗಿ ಎಚ್.ವಿ. ಶ್ರೀನಿವಾಸ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಈ ಸಂದರ್ಭದಲ್ಲಿ ಒಕ್ಕೂಟದ ರಾಜ್ಯಾಧ್ಯಕ್ಷ ಎನ್.ಇ. ನಟರಾಜ್, ಜಿಲ್ಲಾಧ್ಯಕ್ಷ ಎಂ.ಆರ್. ಮಲ್ಲಿಕಾರ್ಜುನ ಸ್ವಾಮಿ, ಡಿ. ಹಾಲಪ್ಪ, ಪಿ. ಶ್ರೀನಿವಾಸ್ ನಾಯ್ಕ್ ಮತ್ತಿತರರು ಉಪಸ್ಥಿತರಿದ್ದರು.

# ಜಿಲ್ಲೆಯಲ್ಲಿ ಕೊರೊನಾ ಇಳಿಕೆ, ನಿರ್ಲಕ್ಷ್ಯ ಹೆಚ್ಚಳ

**(1ನೇ ಪುಟದಿಂದ)** ಸೇರಿದಂತೆ ತಾಲ್ಲೂಕು ಮಟ್ಟದಲ್ಲೂ ಕೋವಿಡ್ ಕೇರ್ ಸೆಂಟರ್ ಆರಂಭವಾಗಿದ್ದವು.

ಆದರೆ ಸೋಂಕು ಇಳಿಕೆಯಾಗುತ್ತಿದ್ದಂತೆ ಜಿಲ್ಲೆಯಲ್ಲಿ ಆಸ್ಪತ್ರೆಗಳಲ್ಲಿಯೇ ಸಾಕಷ್ಟು ಬೆಡ್‌ಗಳ ಲಭ್ಯತೆ ಇದೆ. ಐಸೋಲೇಷನ್, ವೆಂಟಿಲೇಟರ್ ಬೆಡ್‌ಗಳಿಗೆ ಬೇಡಿಕೆಯೂ ತಗ್ಗಿದೆ. ಈ ಹಿನ್ನೆಲೆಯಲ್ಲಿ ಸದ್ಯ ಉಳಿದಿರುವ ಎರಡು ಕೋವಿಡ್ ಕೇರ್ ಸೆಂಟರ್‌ಗಳನ್ನೂ ಶೀಘ್ರವೇ ತೆರವುಗೊಳಿಸುವ ಸಾಧ್ಯತೆ ಇದೆ.

**ಹೆಚ್ಚಿದ ನಿರ್ಲಕ್ಷ್ಯ :** ಜಿಲ್ಲೆಯಲ್ಲಿ ಸೋಂಕು ಕಡಿಮೆಯಾಗುತ್ತಿದ್ದಂತೆ ಕೊರೊನಾ ಬಗ್ಗೆ ಜನತೆಯ ನಿರ್ಲಕ್ಷ್ಯವೂ ಹೆಚ್ಚಾಗುತ್ತಿದೆ. ಆ ಮೂಲಕ ಮೂರನೇ ಅಲೆಯನ್ನು ಜನರೇ ಸ್ವಾಗತಿಸುತ್ತಿದ್ದಾರೆಂಬಂತೆ ಭಾಸವಾಗುತ್ತಿದೆ.

ಈ ಹಿಂದೆ ವಿಧಿಸಿದ್ದ ಲಾಕ್‌ಡೌನ್ ಕಠಿಣ ನಿರ್ಬಂಧಗಳು ಬಹುತೇಕ ಸಡಿಲಗೊಂಡಿವೆ. ಇದನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವ ಜನರು ಕೊರೊನಾ ಪೂರ್ಣ ಮಾಯವಾಗಿದೆ ಎಂದು ಭಾವಿಸಿದಂತಿದೆ. ಮಾರುಕಟ್ಟೆಗಳಲ್ಲಿ, ಹೋಟೆಲ್‌ಗಳಲ್ಲಿ ಜನರು ಸಾಮಾಜಿಕ ಅಂತರವನ್ನೇ ಮರೆತಿದ್ದಾರೆ.

ವ್ಯಾಪಾರ-ವಹಿವಾಟುಗಳ ವೇಳೆ ಮಾಸ್ಕ್ ಮರೆಯಾಗುತ್ತಿದೆ. ಇನ್ನು ಸಂಜೆ ಕಾರಾ-ಮಂಡಕ್ಕಿ, ಮಿರ್ಚಿ, ಪಾನಿಪುರಿ, ಗೋಬಿ, ಬೆಣ್ಣೆ ದೋಸೆ ಮುಂತಾದ ತಿಂಡಿಗಳಿಗಾಗಿ ಮುಗಿ ಬೀಳುತ್ತಿದ್ದಾರೆ. ಬಸ್ಸುಗಳಲ್ಲೂ ಜನರು ಮಾಸ್ಕ್ ಧರಿಸುತ್ತಿಲ್ಲ. ಆಟೋಗಳಲ್ಲೂ ಮಾರ್ಗಸೂಚಿ ಪಾಲನೆಯಾಗುತ್ತಿಲ್ಲ.

**ತುಂಬಿಕೊಳ್ಳುವ ಆಪೆ ಆಟೋಗಳು:** ನಗರದಲ್ಲಿ ಆಪೇ ಆಟೋ ಚಾಲಕರು ಕಾನೂನಿಗೂ ನಮಗೂ ಸಂಬಂಧವೇ ಇಲ್ಲ ಎಂಬಂತೆ ವರ್ತಿಸಲಾರಂಭಿಸಿದ್ದಾರೆ. ಒಂದು ಆಟೋದಲ್ಲಿ ಚಾಲಕನ ಅಕ್ಕ ಪಕ್ಕ ಮೂವರು, ಮಧ್ಯಭಾಗದಲ್ಲಿ 8 ಜನರು ಹಿಂಬದಿಯಲ್ಲಿ ನಾಲ್ವರು ಕುಳಿದ್ದರೆ ಆಟೋ ಟಾಪ್ ಹಿಡಿದು ನಿಲ್ಲುವವರು ಇಬ್ಬರು ಹೀಗೆ 14 ರಿಂದ 16 ಜನರನ್ನು ಕುರಿಗಳಂತೆ ಕೊಂಡೊಯ್ಯುವುದು ಸಾಮಾನ್ಯವಾಗಿದೆ.

ಒಂದೆಡೆ ಚಾಲಕರು ಅಥವಾ ಮಾಲೀಕರು ಕಾನೂನು ಹಾಗೂ ಕೊರೊನಾ ಮಾರ್ಗಸೂಚಿಗಳನ್ನು ಗಾಳಿಗೆ ತೂರಿದ್ದರೆ, ಮತ್ತೊಂದೆಡೆ ಪೊಲೀಸರೂ ಸಹ ಪ್ರಮುಖ ವೃತ್ತ ಹಾಗೂ ರಸ್ತೆಗಳಲ್ಲಿಯೇ ಇಂತಹ ಆಟೋಗಳನ್ನು ಕಂಡೂ ಕಾಣದಂತೆ ಜಾಣ ಕುರುಡು ಪ್ರದರ್ಶಿಸುತ್ತಿದ್ದಾರೆ. ಈ ಆಟೋಗಳಲ್ಲಿ ಎಷ್ಟು ಜನರನ್ನು ಕೊಂಡೊಯ್ಯಬೇಕೆನ್ನುವ ಬಗ್ಗೆ ಪೊಲೀಸ್ ಇಲಾಖೆ ಚಾಲಕರು ಹಾಗೂ ಜನರಿಗೆ ಸ್ಪಷ್ಟಪಡಿಸಬೇಕಿದೆ.

ಸೋಂಕು ಹೆಚ್ಚಾಗಿದ್ದ ವೇಳೆ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಿ, ರಸ್ತೆಗಳಲ್ಲಿ ವಾಹನಗಳನ್ನು ತಡೆದು ದಂಡ ವಿಧಿಸುತ್ತಿದ್ದ ಪೊಲೀಸ್ ಇಲಾಖೆಯು ಈಗಲೂ ಇದೇ ಕ್ರಮ ಮುಂದುವರೆಸಿದರೆ ಮಾತ್ರ ಮೂರನೇ ಅಲೆಯನ್ನು ತುಸು ದೂರ ಮುಂದೂಡಬಹುದು.

## ರಸ್ತೆ ಅಪಘಾತದಲ್ಲಿ ಶಿಕ್ಷಕನ ಸಾವು

ದಾವಣಗೆರೆ, ಜು.14- ಕಾರು ಡಿಕ್ಕಿ ಹೊಡೆದ ಪರಿಣಾಮ ಬೆಳಗಿನ ವಾಯು ವಿಹಾರಕ್ಕೆ ಹೋಗಿದ್ದ ಶಾಲಾ ಶಿಕ್ಷಕರೋರ್ವರು ತಲೆಗಾದ ತೀವ್ರ ಪೆಟ್ಟಿನಿಂದ ಗಾಯಗೊಂಡು ಸ್ಥಳದಲ್ಲೇ ದಾರುಣವಾಗಿ ಸಾವಿಗೀಡಾದ ಘಟನೆ ನಗರದ ರಾಷ್ಟ್ರೀಯ ಹೆದ್ದಾರಿ- 48ರ ಎಸ್ಸೆಸ್ ಹೈಟೆಕ್ ಆಸ್ಪತ್ರೆ ಬಳಿ ಇಂದು ಬೆಳಗಿನ ಜಾವ ಸಂಭವಿಸಿದೆ.

ಶಕ್ತಿ ನಗರ ಸಮೀಪದ ರಾಜೇಂದ್ರ ಬಡಾವಣೆಯ ವಾಸಿ, ಪ್ರೌಢಶಾಲಾ ಶಿಕ್ಷಕ ಅಶೋಕ್ ಕುಮಾರ್ (50) ಮೃತಪಟ್ಟ ದುರ್ದೈವಿ. ಕಾರು ಹೆದ್ದಾರಿ ಪಕ್ಕದ ಭತ್ತದ ಗದ್ದೆಗೆ ಹೋಗಿ ಬಿದ್ದಿದ್ದು, ಮುಂಭಾಗ ನಜ್ಜುಗುಜ್ಜಾಗಿದೆ. ಅದರಲ್ಲಿದ್ದ ಇಬ್ಬರು ಸಣ್ಣ - ಪುಟ್ಟ ಗಾಯಗಳೊಂದಿಗೆ ಅಪಾಯದಿಂದ ಪಾರಾಗಿದ್ದಾರೆ ಎನ್ನಲಾಗಿದೆ.

ಬೆಂಗಳೂರು ಕಡೆಯಿಂದ ಹುಬ್ಬಳ್ಳಿ ಕಡೆಗೆ ಚಲಿಸುತ್ತಿದ್ದ ಮಹಾರಾಷ್ಟ್ರ ನೋಂದಣಿ ಹೊಂದಿದ ಕಾರು ನಿಯಂತ್ರಣ ತಪ್ಪಿದ ಪರಿಣಾಮ ಅಶೋಕ್ ಕುಮಾರ್ ಗೆ ಡಿಕ್ಕಿಪಡಿಸಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಈ ಸಂಬಂಧ ದಕ್ಷಿಣ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮಾಸ್ಟರ್‌ಕಾರ್ಡ್ ಗೆ ಆರ್.ಬಿ.ಐ. ತಡೆ

ಮುಂಬೈ, ಜು. 14 – ಅಮೆರಿಕದ ಮಾಸ್ಟರ್‌ಕಾರ್ಡ್ ಕಂಪನಿಯು ಯಾವುದೇ ಹೊಸ ಕ್ರೆಡಿಟ್, ಡೆಬಿಟ್ ಹಾಗೂ ಪ್ರೀಪೇಯ್ಡ್ ಕಾರ್ಡ್‌ಗಳನ್ನು ಜುಲೈ 22ರಿಂದ ನೀಡದಂತೆ ರಿಸರ್ವ್ ಬ್ಯಾಂಕ್ (ಆರ್.ಬಿ.ಐ.) ಆದೇಶಿಸಿದೆ. ದತ್ತಾಂಶ ಸಂಗ್ರಹ ನಿಯಮಗಳನ್ನು ಪಾಲಿಸಲು ಕಂಪನಿ ವಿಫಲವಾದ ಕಾರಣ ರಿಸರ್ವ್ ಬ್ಯಾಂಕ್ ಈ ಪ್ರಮುಖ ಕ್ರಮ ತೆಗೆದುಕೊಂಡಿದೆ.

ಮಾಸ್ಟರ್‌ಕಾರ್ಡ್‌ಗೂ ಮುಂಚೆ, ಅಮೆರಿಕನ್ ಎಕ್ಸ್‌ಪ್ರೆಸ್ ಬ್ಯಾಂಕಿಂಗ್ ಕಾರ್ಪ್ ಹಾಗೂ ಡೈನರ್ಸ್ ಕ್ಲಬ್ ಇಂಟರ್‌ನ್ಯಾಷನಲ್ ಕಾರ್ಡ್‌ಗಳ ಮೇಲೆ ರಿಸರ್ವ್ ಬ್ಯಾಂಕ್ ನಿಷೇಧ ಹೇರಿತ್ತು. ಆದರೆ, ತನ್ನ ಈ ಉಸ್ತುವಾರಿ ಕ್ರಮದಿಂದಾಗಿ ಈಗಾಗಲೇ ಕಾರ್ಡ್ ಹೊಂದಿರುವವರ ಮೇಲೆ ಯಾವುದೇ ಪರಿಣಾಮವಾಗುವುದಿಲ್ಲ ಎಂದು ರಿಸರ್ವ್ ಬ್ಯಾಂಕ್ ಹೇಳಿದೆ.

ಮಾಸ್ಟರ್ ಕಾರ್ಡ್ ಲೋಪ ಹೊಂದಿದ್ದರೂ ಸಹ ಅದಕ್ಕೆ ಸಮರ್ಪಕ ಅವಕಾಶ ನೀಡಲಾಗಿತ್ತು. ಪಾವತಿ ವ್ಯವಸ್ಥೆಯ ಮಾಹಿತಿಯ ನಿರ್ದೇಶನಗಳನ್ನು ಕಂಪನಿ ಇನ್ನೂ ಪಾಲಿಸಿಲ್ಲ ಎಂದು ರಿಸರ್ವ್ ಬ್ಯಾಂಕ್ ಹೇಳಿದೆ. ರಿಸರ್ವ್ ಬ್ಯಾಂಕ್ 2018ರಲ್ಲಿ ಹೊರಡಿಸಿದ ನಿರ್ದೇಶನಗಳ ಪ್ರಕಾರ, ಎಲ್ಲಾ ಪಾವತಿ ಸೇವಾ ಕಂಪನಿಗಳು 6 ತಿಂಗಳಲ್ಲಿ ಭಾರತದಲ್ಲೇ ಮಾಹಿತಿಸಂಗ್ರಹಿಸಬೇಕಿತ್ತು.

**ಸೈಟು, ಮನೆ ಖರೀದಿಗೆ ಬೇಕಾಗಿದೆ**
ಕೇವಲ (1/2 %) ಅರ್ಧ ಪರ್ಸೆಂಟ್ ಕಮೀಷನ್ ಗೆ ನಾವು ನಿಮ್ಮ ಸೈಟು, ಮನೆ ಮಾರಿಸಿಕೊಡುತ್ತೇವೆ.
ಕಿರಣ್ ಬೂಸ್ನೂರ್ : 98440-63409

**ಮಣಿಪಾಲ್ ಆರೋಗ್ಯ ಕಾರ್ಡ್**
15.07.2021ರವರೆಗೆ ವ್ಯಾಲಿಡಿಟಿ ಇರುವಂತಹ ಕಾರ್ಡ್‌ದಾರರು ರಿನೀವಲ್ ಮಾಡಿಕೊಳ್ಳಲು ಇಂದೇ ಕೊನೆಯ ದಿನ.
ಸಂಪರ್ಕಿಸಿ :
ಮಣಿಪಾಲ್ ಮಾಹಿತಿ ಕೇಂದ್ರ
ತ್ರಿಶೂಲ್ ಟಾಕೀಸ್ ರಸ್ತೆ, ದಾವಣಗೆರೆ.
ಮೊ: 97317 09177, 89042 19373

ಪ್ರೀತಿಯೇ ದೇವರು
**ಕರುಣಾ ಜೀವ ಕಲ್ಯಾಣ ಟ್ರಸ್ಟ್**
ಶಿಕ್ಷಣ, ಆರೋಗ್ಯ, ತಳ್ಳುವ ಗಾಡಿ, ಅನ್ನ ದಾಸೋಹದ ದಾನಿಗಳು
D.J. ವೀರೇಶ್
ದಂತವೈದ್ಯರು, ಬಾಪೂಜಿ ದಂತ ವಿದ್ಯಾಲಯ.
ಧನ ಸಹಾಯ ಮಾಡುವವರು ಸಂಪರ್ಕಿಸಿ
91104 55199

**ಮನೆಯ ರೀ ಪೇಂಟಿಂಗ್**
ಹಳೆಯ ಮನೆಯನ್ನು ಹೊಸದಾಗಿ ಪೇಂಟಿಂಗ್ ಮಾಡಿಸಿಕೊಳ್ಳಿ, ಕಡಿಮೆ ದರದಲ್ಲಿ
72046 33302

**ಬಾಡಿಗೆಗೆ**
ಪಿ.ಜಿ. ನಡೆಸಲು ಅನುಕೂಲವಾದ ಬಿಲ್ಡಿಂಗ್ ಬಾಡಿಗೆಗೆ ಇದೆ. 15 ರೂಂಗಳು ಅಟ್ಯಾಚ್ಡ್ ಬಾತ್‌ರೂಂ ಹಾಗೂ ಊಟದ ಹಾಲ್ ಮತ್ತು ಹೋಟೆಲ್ ನಡೆಸಲು ಮಳಿಗೆ ಬಾಡಿಗೆಗೆ ಇದೆ ಮತ್ತು ಮನೆ ಇದೆ ವಿಚಾರಿಸಿರಿ. ವಿಳಾಸ: ಸರಸ್ವತಿ ಬಡಾವಣೆ, ಕೆನರಾ ಬ್ಯಾಂಕ್ ಹತ್ತಿರ, ನಿಟುವಳ್ಳಿ, ದಾವಣಗೆರೆ
81055 42689

**ನಿಮ್ಮ ಮನೆಯಲ್ಲಿ ನೀರು ಸೋರುತ್ತಿದೆಯೇ ?**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗು ವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**ಮಗು ನೋಡಿಕೊಳ್ಳಲು ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಒಂದು ವರ್ಷದ ಮಗುವನ್ನು ನೋಡಿಕೊಳ್ಳಲು ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿರಿ
98808 12989
83100 73553

**ಬೇಕಾಗಿದ್ದಾರೆ**
ITI, Diploma (Mechanical), Service Advisor, Floor in charge (Male)
84315 26167
95382 95776

**COMMERCIAL BUILDING FOR RENT**
at P.J. Extension, Ram & C0 Circle, 4th Main, Davangere.
Ground Floor 1200 Sq.ft, First Floor, 1150 Sq.ft. Second Floor, 4 Rooms with attatch Bath Room.
Contact 98458 07367

**HOUSE TO LET**
2 BHK, 2 Floor Furnished Modern House
Vidyanagar Main Road Opposite Post Office.
Contact : Anil
94498 33024

**ಸೈಟ್ ಮಾರಾಟಕ್ಕಿದೆ**
ದಾವಣಗೆರೆಯ KHBಯಲ್ಲಿ ಪೂರ್ವ ದಿಕ್ಕಿನ 30x50 ಸೈಟ್ ಮಹಾನಗರ ಪಾಲಿಕೆಯಲ್ಲಿ ಎಂಟ್ರಿಯಾಗಿರುತ್ತದೆ.
9448874011

**ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಕೆಲಸಕ್ಕಾಗಿ ಪದವೀಧರ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಬಳ 12000 ದಿಂದ 24000 ವರೆಗೆ ವಯೋಮಿತಿ 21-36 ವರ್ಷದೊಳಗಿನವರಿಗೆ ಮೊದಲ ಆದ್ಯತೆ.
ವಿಳಾಸ: ಸ್ವಾದ್ ಹೈಪರ ಮಾರ್ಟ್
4ನೇ ಮೇನ್ ರೋಡ್, ಪಿ.ಜೆ. ಬಡಾವಣೆ, ದಾವಣಗೆರೆ.
90603 99111, 95353 97599

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್‌ಮನ್ ಮತ್ತು ಸೇಲ್ಸ್ ಗರ್ಲ್ಸ್ ಹಾಗೂ ಕ್ಲೀನಿಂಗ್ ಕೆಲಸ ಮಾಡಲು ಬೇಕಾಗಿದ್ದಾರೆ.
ಸಂಪರ್ಕಿಸಿ
87622 21697

**ಭವಿಷ್ಯ Astrologer**
ಶ್ರೀ ಬನಶಂಕರಿ ಜ್ಯೋತಿಷ್ಯಾಲಯ
ಮೋಡಿ ಮಾಂತ್ರಿಕ ಗಿಡ್ಡಪ್ಪ
ಶ್ರೀ ಚೌಡೇಶ್ವರಿ ಭೂತರಾಯ ಆರಾಧಕರು. 2 ದಿನದಲ್ಲಿ ಪರಿಹಾರ. ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ವ್ಯಾಪಾರದಲ್ಲಿ ಲಾಭ-ನಷ್ಟ,ಮಾಟ-ಮಂತ್ರ, ಆರೋಗ್ಯ, ಲೈಂಗಿಕ. ಸಮಸ್ಯೆ, ಸಾಲಬಾಧೆ, ಮನ:ಪ್ರೇತಬಾಧೆ, ಅಂಗುಷ್ಟ ವಶೀಕರಣ, ಇಷ್ಟಪಟ್ಟವರು ನಿಮ್ಮಂತೆ ಆಗಲು ನಮ್ಮಲ್ಲಿ ಶಾಶ್ವತ ಪರಿಹಾರ.
ಇಂದೇ ಕರೆ ಮಾಡಿ : 9980770791

**ಆರ್ಥಿಕ ಸಫಲತೆ**
ಜೀವನದ ಆರ್ಥಿಕ ಸಫಲತೆಗಾಗಿ ಸಾಮಾಜಿಕ ಕಳಕಳಿಯೊಂದಿಗೆ ಸ್ವತಂತ್ರವಾಗಿ ಕಾರ್ಯನಿರ್ವಹಿಸಬಲ್ಲ 35 ವರ್ಷ ಮೇಲ್ಪಟ್ಟ ಯಾವುದೇ ಪುರುಷರು, ಮಹಿಳೆಯರು ಸಂಪರ್ಕಿಸಿ
ಮೊ: 98807 29108

**ಮನೆಯ ನೀರಿನ ತೊಟ್ಟಿ, ಟ್ಯಾಂಕುಗಳು ಗಲೀಜಾಗಿದ್ದರೆ**
ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟಾ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ಗುಲಾಬಿ ಹಾಗೂ ಇತರೆ ಸಸಿಗಳು ದೊರೆಯುತ್ತವೆ. ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ.
ಸುಬ್ರಮಣಿ ಆಗ್ರೋಟೆಕ್
ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
94484 39639, 63665 96479

**Loans All Type Call**
96118 66449

**Home Tution**
100% Result
B.Sc. B.Ed, M.Sc ಮಾಡಿರುವ ಶಿಕ್ಷಕರು ನಿಮ್ಮ ಮನೆಗೇ ಬಂದು ಪಾಠ ಮಾಡುವರು (4 ರಿಂದ 10ನೇ ತರಗತಿ) (State, CBSE, ICSE, ISC)
ಕೂಡಲೇ ಸಂಪರ್ಕಿಸಿ
90192 68891
89513 97381

**ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ**
ಸೈಟ್ ನಂ-8, ಅಳತೆ 20x80 ಗುಜರಿ ಲೇಔಟ್ ಮಾಗಾನಹಳ್ಳಿ ಮುಖ್ಯ ರಸ್ತೆ (ಡಬಲ್ ರಸ್ತೆ) ಆಖ್ಸಾ ಮಸೀದಿ ಕಾಂಪ್ಲೆಕ್ಸ್ ಎದುರು, ಜೆಡಿಎಸ್ ಆಫೀಸ್ ಹತ್ತಿರ, ದಾವಣಗೆರೆ-1.
83106 39057

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಕೆಲಸದ ಸಮಯ : ಬೆಳಿಗ್ಗೆ 9.00 ರಿಂದ ಸಂಜೆ 8.00 ರವರೆಗೆ
ಕಶೆಟ್ಟರ್ ಇಂಡಸ್ಟ್ರಿಯಲ್ ಎಸೆನ್ಷಿಯಲ್ಸ್
ಲಾಯರ್ ರಸ್ತೆ, ಟಯರ್ ಅಂಗಡಿಗಳ ಹತ್ತಿರ, ದಾವಣಗೆರೆ.

**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
ಅಮರಾವತಿ ಹಾಲಪ್ಪ
98454 84076

**SSLC / PUC / Degree ಪಾಸ್/ಫೇಲ್ ಮುಂದೇನು?**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್- 2ವರ್ಷ. ಕೇವಲ 6 ತಿಂಗಳ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಗಂಗೋತ್ರಿ ಕಮ್ಯುನಿಟಿ ಕಾಲೇಜ್ (ರಿ)
ಬಂಧನ್ ಬ್ಯಾಂಕ್ ಹತ್ತಿರ, ಲಾಯರ್ ರೋಡ್, ದಾವಣಗೆರೆ
86602 35013

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**14ನೇ ವರ್ಷದ ಪುಣ್ಯಸ್ಮರಣೆ**



ದಿ|| ಶ್ರೀ ಪಿ. ಲಾಲ್ಯನಾಯ್ಕ
ಜನನ : 01.07.1948, ಮರಣ : 15.07.2007
ತೌಡೂರು ತಾಂಡಾ (ಐ.ಬಿ. ನಿವೃತ್ತ ಮೇಟಿ, ಜಗಳೂರು)
ನೀವು ನಮ್ಮನ್ನಗಲಿ ಇಂದಿಗೆ ಹದಿನಾಲ್ಕು ವರ್ಷಗಳಾದವು. ನೀವು ಹಾಕಿಕೊಟ್ಟ ಮಾರ್ಗದಲ್ಲೇ ಮುನ್ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ,
ಪತ್ನಿ : ಪೂಜಾರಿ ಜಯಮ್ಮ
ಮಕ್ಕಳು : ಪಿ.ಎಲ್. ಮಲ್ಲಿಕಾರ್ಜುನ, ಪಿ.ಎಲ್. ಪಂಪಾ, ಪಿ.ಎಲ್. ಜ್ಯೋತಿ ಹಾಗೂ ಅಳಿಯಂದಿರು, ಮೊಮ್ಮಕ್ಕಳು, ಜಗಳೂರು.

**ಬಾಡಿಗೆಗೆ ಇದೆ**
ರಮೇಶ್ ಮಿಲ್ಟ್ರಿ ಹೋಟೆಲ್ ಸಾಮಗ್ರಿ ಸಹಿತ ಬಾಡಿಗೆಗಿದೆ. ನಿಟುವಳ್ಳಿ ರಸ್ತೆ, ಡಾ. ಜಾಧವ್ ಹಾಸ್ಪಿಟಲ್ ಪಕ್ಕ
ಮೊ: 99458 39436

**ಸೈಟ್/ಮನೆಗಳು ಲಭ್ಯವಿವೆ**
ಕಡಿಮೆ ಬೆಲೆಯಲ್ಲಿ ಡಿಸಿಎಂ ಟೌನ್‌ಶಿಪ್ ಹತ್ತಿರ ಸೈಟ್‌ಗಳು/ ಮನೆಗಳು ಲಭ್ಯವಿವೆ.
ಮೊ: 7204158780

**ಬೇಕಾಗಿದ್ದಾರೆ**
ನುರಿತ ಕೋರಲ್ ಡ್ರಾ, ಡಿಸೈನಿಂಗ್, ಟೈಪಿಂಗ್ ಹಾಗೂ ಅಕೌಂಟ್ಸ್ ಅನುಭವವುಳ್ಳವರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೀಡಲಾಗುವುದು.
ರಾಜ್ ಪ್ರಿಂಟರ್ಸ್, ಶಿವಪ್ಪಯ್ಯ ಸರ್ಕಲ್ ಹತ್ತಿರ, ದಾವಣಗೆರೆ.
99640 28818, 9742774340

**WE NEED LADY MANAGER FOR SALOON**
Qualification : any Degree
Languages : English, Hindi, Kannada please contact :
99724 76950
89510 66905

**3 BHK ಮನೆ ಬಾಡಿಗೆಗೆ ಇದೆ**
4ನೇ ಕ್ರಾಸ್, ಎಲ್.ಐ.ಸಿ. ಕಾಲೋನಿ, #1891/24 ಪೂರ್ವ ಫೇಸಿಂಗ್, ವಾಸ್ತು ಪ್ರಕಾರ ನೂತನ ಕಾಲೇಜ್ ಹಿಂಭಾಗ, ದಾವಣಗೆರೆ.
99863 71175, 99869 98400

**ಪ್ರವೇಶ ಪ್ರಕಟಣೆ 2020-21**
SSLC/PUC/ ITI ಪಾಸ್/ಫೇಲ್ ನಂತರ ಮುಂದೇನು?
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ ITI ಪಾಸ್/ಫೇಲ್
6 ತಿಂಗಳ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂ ಮತ್ತು ಅರೆ ಸರ್ಕಾರಿ ಆಸ್ಪತ್ರೆಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15 ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276 93533 49357

**ಮನೆ ಬಾಡಿಗೆಗೆ/ಲೀಸ್‌ಗಿದೆ**
3 ಬೆಡ್‌ರೂಂ, ಕಾರ್ಪೋರೇಷನ್ ಹಾಗೂ ಬೋರ್‌ವೆಲ್ ನೀರಿನ ಸೌಲಭ್ಯವಿರುವ, ವಾಸ್ತು ಪ್ರಕಾರ ಕಟ್ಟಿರುವ ಸುಸಜ್ಜಿತ 1ನೇ ಮಹಡಿ ಮನೆ ನಂ.1890/23, 4ನೇ ಮೇನ್, ಎಲ್ಐಸಿ ಕಾಲೋನಿ, ವಿದ್ಯಾನಗರ, ನೂತನ ಕಾಲೇಜ್ ಹಿಂಭಾಗ, ದಾವಣಗೆರೆ ಇಲ್ಲಿ ಬಾಡಿಗೆಗೆ/ಲೀಸ್‌ಗಿದೆ. ಸಂಪರ್ಕಿಸಿ:
93410 12022

**ನೇರ ಪರೀಕ್ಷೆಗಳು**
ಮನೆಯಲ್ಲಿ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC, SCIENCE COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276 93533 49357

**ಹುಡುಗರು ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು 20 ರಿಂದ 40 ವರ್ಷ ವಯಸ್ಸಿನ ಹುಡುಗರು ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಲೈಸೆನ್ಸ್ ಹೊಂದಿರುವವರಿಗೆ ಆದ್ಯತೆ.
73380 33337

**House for Rent or lease**
Lokikere Road, Near TV Station, Subramanaya swamy Temple, 1st Floor For Rent Furnished, 2BHK, car Parking, Lift (North Facing, Vastu Compliance) Near by to SS Hospital, lalith School, Sir MV College, Zilla Panchayat, Rent 10,500, Lease 12 Lakhs
Mo: 99865 38099

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**REQUIRED**
ITI /DIPLOMA IN ELECTRICAL, SALES EXECUTIVES
WALK IN INTERVIEW
KRISVA
ನಂ. 84/2, ಮಹಾಲಕ್ಷ್ಮಿ ಪ್ಲಾಜಾ, ಅರುಣ ಚಿತ್ರಮಂದಿರ ಹತ್ತಿರ, ಪಿ.ಬಿ. ರೋಡ್, ದಾವಣಗೆರೆ - 577 002.
ಫೋ : 63666 35555
98800 15555

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

## ಸಾರ್ಜೆಂಟ್ ವಾಗೀಶ್‌ಗೆ ಮುಖ್ಯಮಂತ್ರಿ ಪದಕ ಪ್ರದಾನ



**ಹರಪನಹಳ್ಳಿ**

ಹರಪನಹಳ್ಳಿ, ಜು.14- ಗೃಹ ರಕ್ಷಕ ದಳದಲ್ಲಿ ಪ್ಲಟೂನ್ ಸಾರ್ಜೆಂಟ್ ಆಗಿ ಸೇವೆ ಸಲ್ಲಿಸುತ್ತಿರುವ ಪಟ್ಟಣದ ವಾಗೀಶ್ ಪೂಜಾರ್ ಅವರು 2020ನೇ ಸಾಲಿನ ಮುಖ್ಯಮಂತ್ರಿ ಪದಕಕ್ಕೆ ಭಾಜನರಾಗಿದ್ದಾರೆ.

ವಾಗೀಶ್ ಪೂಜಾರ್ ಅವರು ಸತತ 31 ವರ್ಷಗಳ ಕಾಲ ಸಲ್ಲಿಸಿದ ಅನನ್ಯ ಸೇವೆಯನ್ನು ಗುರುತಿಸಿ ಈ ಗೌರವ ನೀಡಲಾಗಿದೆ.

ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಿನ್ನೆ ನಡೆದ ಸಮಾರಂಭದಲ್ಲಿ ವಾಗೀಶ್ ಪೂಜಾರ್ ಅವರಿಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರು ಪದಕ ನೀಡಿ ಗೌರವಿಸಿದ್ದಾರೆ.

## ಕೊರೊನಾದಿಂದ ಸಾವಿಗೀಡಾಗಿರುವ ರೈತರ ಸಾಲ ಮನ್ನಾಗೆ ಪರಿಶೀಲನೆ

ಬೆಂಗಳೂರು, ಜು. 14 – ಕೊರೊನಾ ಕಾರಣದಿಂದಾಗಿ 10,187 ರೈತರು ಸಾವನ್ನಪ್ಪಿದ್ದು, ಅವರು 79.47 ಕೋಟಿ ರೂ.ಗಳ ಸಾಲ ಹೊಂದಿದ್ದಾರೆ. ಈ ಸಾಲವನ್ನು ಮನ್ನಾ ಮಾಡಲು ಸರ್ಕಾರ ಪರಿಶೀಲಿಸುತ್ತಿದೆ ಎಂದು ಸಹಕಾರಿ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದ್ದಾರೆ.

ಜಿಲ್ಲಾ ಸಹಕಾರಿ ಬ್ಯಾಂಕ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳು ಹಾಗೂ ಅಪೆಕ್ಸ್ ಬ್ಯಾಂಕ್ ಮೂಲಕ ಈ ಸಾಲಗಳನ್ನು ಪಡೆಯಲಾಗಿದೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮನ್ನಾ ಬಗ್ಗೆ ಮೂರ್ನಾಲ್ಕು ದಿನಗಳಲ್ಲಿ ನಿರ್ಧರಿಸಲಿದ್ದಾರೆ ಎಂದವರು ಹೇಳಿದ್ದಾರೆ.

ಮೂರ್ನಾಲ್ಕು ದಿನಗಳಲ್ಲಿ ಅಪೆಕ್ಸ್ ಬ್ಯಾಂಕ್ ಮಂಡಳಿ ಸಭೆ ಕರೆಯಲಾಗುವುದು. ಕೊರೊನಾದಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರನ್ನು ರಕ್ಷಿಸಲು ಸರ್ಕಾರ ಬದ್ಧವಾಗಿದೆ ಎಂದವರು ಹೇಳಿದ್ದಾರೆ.

## 20 ಪಾಸಿಟಿವ್, 21 ಗುಣಮುಖ

ದಾವಣಗೆರೆ, ಜು.14- ಜಿಲ್ಲೆಯಲ್ಲಿ ಬುಧವಾರ 20 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, ಒಬ್ಬರು ಮೃತಪಟ್ಟಿದ್ದಾರೆ. 21 ಜನರು ಗುಣಮುಖ ರಾಗಿದ್ದಾರೆಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 11, ಚನ್ನಗಿರಿ 4, ಹೊನ್ನಾಳಿ ತಾಲ್ಲೂಕಿನಲ್ಲಿ 4 ಹಾಗೂ ಹೊರ ಜಿಲ್ಲೆಯ ಒಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ. ಜಿಲ್ಲೆಯಲ್ಲಿ 418 ಸಕ್ರಿಯ ಪ್ರಕರಣಗಳಿದ್ದು, ಇಲ್ಲಿಯವರೆಗೆ 584 ಜನರು ಸೋಂಕಿನಿಂದಾಗಿ ಮೃತಪಟ್ಟಿದ್ದಾರೆ.

## ಜೂನ್‌ನಲ್ಲಿ ಸಗಟು ಹಣದುಬ್ಬರ ಶೇ.12.07

ನವದೆಹಲಿ, ಜು. 14 - ಜೂನ್ ತಿಂಗಳಲ್ಲಿ ಸಗಟು ಹಣ ದುಬ್ಬರ ಶೇ.12.07ಕ್ಕೆ ಇಳಿಕೆ ಯಾಗಿದೆ. ಕಚ್ಚಾ ತೈಲ ಹಾಗೂ ಆಹಾರ ವಸ್ತುಗಳ ಬೆಲೆಗಳಲ್ಲಿ ತುಸು ಮೃದುತ್ವ ಕಂಡು ಬಂದಿ ರುವುದು ಇದಕ್ಕೆ ಕಾರಣವಾಗಿದೆ.

ಆದರೆ, ಸತತ 3 ತಿಂಗಳಿ ನಿಂದ ಸಗಟು ಹಣ ದುಬ್ಬರ ಎರಡಂಕಿ ಮಟ್ಟದಲ್ಲೇ ಇದೆ. ಕಳೆದ ವರ್ಷ ಸಗಟು ಹಣದುಬ್ಬರ ಋಣಾತ್ಮಕ ಶೇ.1.81ರಷ್ಟಿತ್ತು. ಇದು ಪ್ರಸಕ್ತ ವರ್ಷ ಹಣದುಬ್ಬರ ಹೆಚ್ಚಾಗಲು ಕಾರಣವಾಗಿದೆ.

## ಜವಳಿ ರಫ್ತು ವಿನಾಯಿತಿ 2024ರವರೆಗೆ ಮುಂದುವರಿಕೆ

ನವದೆಹಲಿ, ಜು. 14 - ಕೇಂದ್ರ ಸರ್ಕಾರ ಆರ್‌ಒಎಸ್‌ಸಿಟಿಎಲ್ ಯೋಜನೆಯನ್ನು ಮಾರ್ಚ್ 2024ರವರೆಗೆ ವಿಸ್ತರಿಸಿದೆ. ಇದರಿಂದಾಗಿ ಜವಳಿ ರಫ್ತುದಾರರು ಅಲ್ಲಿಯವರೆಗೆ ಕೇಂದ್ರ ಹಾಗೂ ರಾಜ್ಯ ತೆರಿಗೆಗಳಿಗೆ ವಿನಾಯಿತಿ ಪಡೆಯಲಿದ್ದಾರೆ.

ಕಾರ್ಮಿಕರನ್ನೇ ಅವಲಂಬಿಸಿದ ಜವಳಿ ವಲಯದ ಉತ್ಪಾದಕತೆ ಹೆಚ್ಚಿಸಲು ಸರ್ಕಾರ ಈ ಕ್ರಮ ತೆಗೆದುಕೊಂಡಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗಿದೆ.


## ನಗರಕ್ಕೆ ಇಂದು ಕೆಪಿಸಿಸಿ ಅಧ್ಯಕ್ಷ ಡಿಕೆಶಿ



ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಇಂದು ಬೆಳಿಗ್ಗೆ 9 ಗಂಟೆಗೆ ನಗರಕ್ಕೆ ಆಗಮಿಸಲಿದ್ದು, ಜಿಲ್ಲಾ ಕಾಂಗ್ರೆಸ್ ವತಿಯಿಂದ ಕೆಪಿಸಿಸಿ ಅಧ್ಯಕ್ಷರನ್ನು ಬಾಡಾ ಕ್ರಾಸ್ ಬಳಿ ಸ್ವಾಗತಿಸಲಾಗುವುದು ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.
















JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte